**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 329/2017**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಶೋಕ್ ವಿ.ಸಿ. |
| ತಂದೆಯ ಹೆಸರು | : | ಚಿಕ್ಕಮಂಟಯ್ಯ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪಿ.ಐ., ಮಹಿಳಾ ಪೋಲೀಸ್ ಠಾಣೆ, ಮೈಸೂರು ನಗರ. |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 14.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಭಾ. ದಂ. ಸಂ. 299 ರಡಿಯಲ್ಲಿ ಮುಖ್ಯ ವಿಚಾರಣೆಃ**

ನಾನು ದಿನಾಂಕಃ 25.06.2016 ರಿಂದ 11.07.2019 ರವರೆಗೆ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದಲ್ಲಿ ಹೆಚ್.ಡಿ. ಕೋಟೆ ಪೋಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 10.01.2017 ರಂದು ಈ ಪ್ರಕರಣದ ಕಡತವನ್ನು ಚಾಸಾ-9 ರವರಿಂದ ಸ್ವೀಕರಿಸಿ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ನಂತರ ದಿನಾಂಕಃ 12.01.2017 ರಂದು ಚಾಸಾ-1 ರಿಂದ ಚಾಸಾ-3 ರವರಿಗೆ ಆದ ಗಾಯದ ಸಂಬಂಧ ಚಾಸಾ-8 ರವರಿಂದ ಗಾಯದ ಪ್ರಮಾಣ ಪತ್ರಗಳನ್ನು ಪಡೆದು ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ತನಿಖೆ

ಪೂರ್ಣಗೊಂಡಿದ್ದು ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ 03 ದಾಖಲೆಗಳನ್ನು ತೋರಿಸಲಾಗಿ, ಸಾಕ್ಷಿ ಅವು ಮೇಲೆ ಹೇಳಿದಂತೆ ಚಾಸಾ-8 ರವರು ನೀಡಿದ ಗಾಯದ ಪ್ರಮಾಣ ಪತ್ರಗಳೆಂದು ಗುರುತಿಸಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಗಾಯದ ಪ್ರಮಾಣ ಪತ್ರಗಳನ್ನು ಕ್ರಮವಾಗಿ **ನಿ.ಪಿ.-5** ರಿಂದ **ನಿ.ಪಿ.-7** ಎಂದು, ಅವುಗಳಲ್ಲಿರುವ ಸಾಕ್ಷಿ ಸಹಿಗಳನ್ನು ಕ್ರಮವಾಗಿ **ನಿ.ಪಿ.-5(ಎ)** ರಿಂದ **ನಿ.ಪಿ.-7(ಎ)** ಎಂದು ಗುರುತಿಸಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**